ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ವಿಭಾಗ ರವರಿಗೆ ಮಂಡಿಸಿದೆ.

(1) ವಿಷಯ: Improvements to Srinidhi Layout, Sapthagiri Layout and Deemandala Layout Roads in Ward No. 09, Vidyaranyapura Sub Division ಕಾಮಗಾರಿಯ ಅಂದಾಜು ಪಟ್ಟಿಯನ್ನು ಅನುಮೋದನೆಗೆ ಸಲ್ಲಿಸುವ ಬಗ್ಗೆ.

(2) ಉಲ್ಲೇಖ: 1. ಮಾನ್ಯ ಶಾಸಕರು, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ರವರ ಪತ್ರ ಸಂಖ್ಯೆ: ಬ್ಯಾವಿಕ್ಷೇ:ಶಾಸಕರು:403:12-13 ದಿನಾಂಕ: 11.01.2013.

2. ಮಾನ್ಯ ಶಾಸಕರು, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ರವರ ಪತ್ರ ಸಂಖ್ಯೆ: ಬ್ಯಾವಿಕ್ಷೇ:ಶಾಸಕರು:475:12-13 ದಿನಾಂಕ: 02.02.2013.

* * * * *

(3) ವಿದ್ಯಾರಣ್ಯಪುರ ಉಪವಿಭಾಗದ ವಾರ್ಡ್ ನಂ. 09ರ ವ್ಯಾಪ್ತಿಯಲ್ಲಿನ ಸಪ್ತಗಿರಿ ಬಡಾವಣೆ, ಶ್ರೀನಿಧಿ ಬಡಾವಣೆ ಮತ್ತು ಡಿಮಂಡಳ ಬಡಾವಣೆ ಪ್ರದೇಶಗಳಲ್ಲಿ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳು ಮಣ್ಣು ರಸ್ತೆಗಳಾಗಿದ್ದು, ಇತ್ತೀಚಿನ ದಿನಗಳಲ್ಲಿ ಬೆಂಗಳೂರು ಜಲಮಂಡಳಿ ರವರಿಂದ ಒಳಚರಂಡಿ ಕೊಳವೆ ಸಾಲುಗಳನ್ನು ಅಳವಡಿಸಲು ರಸ್ತೆಗಳನ್ನು ಅಗೆದಿದ್ದು, ಗುಂಡಿಗಳಿಂದ ಕೂಡಿರುತ್ತದೆ ಹಾಗೂ ಸಾರ್ವಜನಿಕರ ಸಂಚಾರಕ್ಕೆ ತುಂಬ ತೊಂದರೆಯಾಗಿರುತ್ತದೆ. ಆದ್ದರಿಂದ ಸದರಿ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಉಲ್ಲೇಖ (1) ಮತ್ತು (ರ)ರ ಪತ್ರದಲ್ಲಿ ಮಾನ್ಯ ಶಾಸಕರು, ಆಯುಕ್ತರಿಗೆ ಪತ್ರ ಬರೆದಿರುತ್ತಾರೆ. ಅದರಂತೆ ಆಯುಕ್ತರು, ವಿಶೇಷ ಆಯುಕ್ತರು, ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರುವ, ಯಲಹಂಕ ವಲಯ ರವರ ಕೂಡಲೇ ಕಾಮಗಾರಿಗಳ ಪಟ್ಟಿ ಮಾಡಿ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಲು ಸೂಚಿಸಿರುತ್ತಾರೆ. ಅದರಂತೆ ಸ್ಥಳ ಪರಿಶೀಲನೆ ಮಾಡಿ ಕಾಮಗಾರಿಯನ್ನು ನಿರ್ಹಿಸಲು ಈ ಕೆಳಕಂಡ ಅಂಶಗಳನ್ನು ಅಳವಡಿಸಿಕೊಂಡು ಅಂದಾಜನ್ನು ತಯಾರಿಸಿ ಸಲ್ಲಿಸಲಾಗಿದೆ.

1. ರಸ್ತೆ ಬದಿ ಚರಂಡಿಗಳಲ್ಲಿ ಹೂಳು ತೆಗಯುವುದು.
2. ರಸ್ತೆಗೆ ಗುಣ್ಣಮಟ್ಟದ ವೆಟ್ ಮಿಕ್ಸ್ ಅಳವಡಿಸುವುದು.
3. ರಸ್ತೆಯ 25 ಎಂ.ಎಂ ದಪ್ಪದ ಎಸ್.ಡಿ.ಬಿ.ಸಿ ಯಿಂದ ಡಾಂಬರ್ ಮಾಡುವುದು ಹಾಗೂ ಇತರೆ ಅವಶ್ಯಕ ಅಂಶಗಳಿಗೆ ಅಂದಾಜಿನಲ್ಲಿ ಅವಕಾಶ ಕಲ್ಪಿಸಿಕೊಂಡಿರುತ್ತದೆ.

(4) ಸದರಿ ಅಂದಾಜು ಪಟ್ಟಿಗಳನ್ನು 2012-13ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಯನ್ನು ಅಳವಡಿಸಿಕೊಂಡು ರೂ. 20.00 ಲಕ್ಷಗಳಿಗೆ ತಯಾರಿಸಿದ್ದು, 2012-13ನೇ ಸಾಲಿನ ಮಾನ್ಯ ಶಾಸಕರ ಅನುದಾನದಲ್ಲಿ ಅನುಮೋದಿಸಿ, ಕಾಮಗಾರಿ ಸಂಕೇತ, ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಲು ಕೋರಲಾಗಿದೆ.

(5) Assistant Executive Engineer
Vidyaranyapura Sub Division
BBMP, Bangalore - 97

(6) ಲೆ.ಆ.ಅ (ಬ್ಯಾಸು), DM 2/2/2013

-2-

ವಿಷಯ :

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ,

(7) ಮಾನ್ಯ ಶಾಸಕರು ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರ ರವರು ಮಾನ್ಯ ಆಯುಕ್ತರವರಿಗೆ ದಿ:11.01.2013ರಂದು ಹಾಗೂ 02.02.2013ರಂದು ಪತ್ರ ಬರೆದು ಈ ಕೆಳಗಿನಂತೆ ಕೋರಿರುತ್ತಾರೆ.(ಮಾನ್ಯ ಶಾಸಕರ ಪತ್ರಗಳನ್ನು ಕಡತದಲ್ಲಿ ಲಗತ್ತಿಸಿದೆ.)

(8) ಬೃ.ಬೆಂ.ಮ.ಪಾ ವ್ಯಾಪ್ತಿಯ ಯಲಹಂಕ ವಲಯದ ಬ್ಯಾಟರಾಯನಪುರ ವಿಭಾಗದ ವ್ಯಾಪ್ತಿಯಲ್ಲಿ ವಾರ್ಡ್ ನಂ:09 ರಲ್ಲಿ ಸಾಕಷ್ಟು ಅಭಿವೃದ್ಧಿ ಕಾಮಗಾರಿಗಳು ಆಗಬೇಕಾಗಿದೆ. ಬಹಳಷ್ಟು ಭಾಗಗಳಲ್ಲಿ ಒಳಚರಂಡಿ ಕಾಮಗಾರಿಗಳು ಹಾಗೂ ಕಾವೇರಿ 4 ನೇ ಹಂತದ 2ನೇ ಘಟ್ಟದ ಕಾಮಗಾರಿಗಳಿಂದ ಬ್ಯಾಟರಾಯನಪುರ ವಿಭಾಗದಲ್ಲಿ ಶೇ.70% ರಸ್ತೆಗಳು ಹದಗೆಟ್ಟಿರುತ್ತವೆ. ಸಾರ್ವಜನಿಕರಿಗೆ, ಶಾಲಾ ಕಾಲೇಜು ಮಕ್ಕಳಿಗೆ ವಯೋವೃದ್ಧರಿಗೆ ದಾರಿಯಲ್ಲಿ ಸಂಚರಿಸಲು ಬಹಳ ಅನಾನುಕೂಲಕರವಾಗಿರುತ್ತದೆ. ಆದ್ದರಿಂದ ಬೃ.ಬೆಂ.ಮ.ಪಾ ವ್ಯಾಪ್ತಿಯ ವಾರ್ಡ್ ಸಂಖ್ಯೆ:09 ರಲ್ಲಿ ರಸ್ತೆಗಳ ದುರಸ್ಥಿಗೆ ಹಾಗೂ ಡಾಂಬರೀಕರಣ ಮಾಡಲು ಸುಮಾರು ರೂ.20.00 ಕೋಟಿಗಳ ಅವಶ್ಯಕತೆ ಇರುತ್ತದೆ ಎಂದು ಮಾನ್ಯ ಶಾಸಕರು ಪತ್ರದ ಸಂಕ್ಯೆ:ಬ್ಯಾವಿಕ್ಷೇ:ಶಾಸಕರು: 403:12–13 ದಿ:11.01.2013ರಂದು ಮಾನ್ಯ ಆಯುಕ್ತರಲ್ಲಿ ಸಹಕಾರಕ್ಕಾಗಿ ವಿನಂತಿಸಿರುತ್ತಾರೆ. ಮಾನ್ಯ ಆಯುಕ್ತರು ದಿ: 11.01.2013ರಂದು ಸಹಿ ಮಾಡಿ, ವಿಶೇಷ ಆಯುಕ್ತರು,ಜಂಟಿ ಆಯುಕ್ತರು ಹಾಗೂ ಮುಖ್ಯ ಅಭಿಯಂತರರ ಮೂಲಕ ಸದರಿ ಕಛೇರಿ ತಲುಪಿ ಕೂಡಲೇ ಕಾಮಗಾರಿಗಳ ಪಟ್ಟಿ ಮಾಡಿ ಅಂದಾಜು ಪಟ್ಟಿಗಳನ್ನು ಸಲ್ಲಿಸಲು ಸೂಚಿಸಿರುತ್ತಾರೆ.

ಮಾನ್ಯ ಶಾಸಕರು ಪತ್ರದ ಸಂಖ್ಯೆ:ಬ್ಯಾವಿಕ್ಷೇ: ಶಾಸಕರು:475:12–13, ದಿ:02.02.2013 ಮೂಲಕ ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಲ್ಲಿ ಕೋರಿರುವ ಪತ್ರದಲ್ಲಿ ಕಡತದಲ್ಲಿ ಮಂಡಿಸಿ ಎಂದು ಸೂಚಿಸಿರುವುದರಿಂದ ಸದರಿ ಅಂದಾಜು ಪಟ್ಟಿಯನ್ನು ರೂ.20.00ಲಕ್ಷಗಳಿಗೆ ತಯಾರಿಸಿ ಕಡತದಲ್ಲಿ ಅನುಮೋದನೆಗಾಗಿ ಸಲ್ಲಿಸಿದೆ.

(9) ಅದರಂತೆ ಸ.ಕಾ.ಅ(ವಿ.ಆ.ವಿ)ರವರು 2012–13ನೇ ಸಾಲಿನ ಮಾನ್ಯ ಶಾಸಕರು ಕೋರಿರುವ ಪತ್ರದಂತೆ ಮಾನ್ಯ ಆಯುಕ್ತರು ಸೂಚಿಸಿರುವಂತೆ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ಪಟ್ಟಿಗಳನ್ನು 2012–13 ನೇ ಸಾಲಿನ ಲೋಕೋಪಯೋಗಿ ದರ ಪಟ್ಟಿಗಳಂತೆ ತಯಾರಿಸಲಾಗಿದ್ದು, ಆಡಳಿತಾತ್ಮಕ ಮಂಜೂರಾತಿಗಾಗಿ, ತಾಂತ್ರಿಕ ಮಂಜೂರಾತಿಗಾಗಿ ಹಾಗೂ ಕಾಮಗಾರಿ ಸಂಕೇತವನ್ನು ನೀಡಲು ಕೋರಿರುತ್ತಾರೆ.

ಆದ್ದರಿಂದ, ಸದರಿ ಕಾಮಗಾರಿಯ ಅಂದಾಜು ಪಟ್ಟಿಯ ಮೊತ್ತವಾದ ರೂ.20.00ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ, ತಾಂತ್ರಿಕ ಮಂಜೂರಾತಿ ಹಾಗೂ ಕಾಮಗಾರಿ ಸಂಕೇತವನ್ನು ಒದಗಿಸಲು ಮಾನ್ಯ ಜಂಟಿ ಆಯುಕ್ತರು(ಯ.ವ)ರವರ ಅನುಮೋದನೆಗಾಗಿ ಮಂಡಿಸಿದೆ.

ಕಾರ್ಯಪಾಲಕ ಅಭಿಯಂತರರು
ಬ್ಯಾಟರಾಯನಪುರ ವಿಭಾಗ

(10) ಮು.ಆ(ಯ.ವ)

2012-13ರ ಆಸ್ತಿನಷ್ಟದ, ಗುತ್ತಿಕರ ಅನುದಾನ ಡಿಎಲ್ಸಿ, ಕೆಕೆ(BTP) ರವರ ಕಾಮಗಾರಿ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ —3—

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

(11)

(1) ರ ಚರ್ಚೆಯಲ್ಲಿ ಉಲ್ಲೇಖಿಸಿದ ಕೆಲಸಕ್ಕೆ, A/A ಗಾಗಿ ಅನುಮೋದನೆ ಕೋರಿ ಪ್ರಸ್ತಾವನೆ, ಅನುಮೋದಿಸಬಹುದಾಗಿದೆ.

P.J. Umesh
ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು-92
04/02/13

JC(1)

ಒಪ್ಪಿಗೆ

ಜಂಟಿ ಆಯುಕ್ತರು
ಯಲಹಂಕ ವಲಯ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬ್ಯಾಟರಾಯನಪುರ, ಬೆಂಗಳೂರು-92
4/2/13

EE(B)

ಜಂಟಿ ಆಯುಕ್ತರು (ಯ.ವ)
ಯಲಹಂಕ ವಲಯ, ಬೃ.ಬೆಂ.ಮ.ಪಾ.
ಸಂ. 676 ದಿನಾಂಕ: 4-2-2013
ಬ್ಯಾಟರಾಯನಪುರ, ಬೆಂಗಳೂರು-92.

(12)

ಕಂಡಿಕೆ(11)ರಲ್ಲಿ ಸದರಿ ಕಾಮಗಾರಿಯ ಅಂದಾಜು ಮೊತ್ತವಾದ ರೂ.20.00ಲಕ್ಷಗಳಿಗೆ ಮಾನ್ಯ ಜಂಟಿಆಯುಕ್ತರು(ಯ.ವ)ರವರು 2012–13ನೇ ಸಾಲಿನ ಶಾಸಕರ ಅನುಧಾನದಡಿಯಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ಕಛೇರಿ ಸಂಖ್ಯೆ:ಬೃ.ಬೆಂ.ಮ.ಪಾ/ಜಂ.ಆ/ಯ.ವ/ಆ.ಅ/873/2012–13, ದಿ:04–02–2013 ರಂತೆ ನೀಡಿದ್ದು,ತಾಂತ್ರಿಕ ಅನುಮೋದನೆಯನ್ನು ಕೋರಿ ಕಡತವನ್ನು ಸಹಿಗಾಗಿ ಮಂಡಿಸಿದೆ.

Priyadarshini. H.S
06/02/13.

ಅ.ಅ(ಯ.ವ)

(13)

ಕಂಡಿಕೆ(11)ರಲ್ಲಿ ಸದರಿ ಕಾಮಗಾರಿಯ ಅಂದಾಜು ಮೊತ್ತವಾದ ರೂ.20.00ಲಕ್ಷಗಳಿಗೆ ಮಾನ್ಯ ಜಂಟಿ ಆಯುಕ್ತರು(ಯ.ವ)ರವರು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು, ತಾಂತ್ರಿಕ ಅನುಮೋದನೆ ನೀಡಲಾಗಿದೆ

Superintending Engineer
Yelahanka Zone
BBMP, Bangalore-92

(14)

ಸದರಿ ಕಾಮಗಾರಿಯ ಅಂದಾಜು ಮೊತ್ತಕ್ಕೆ ಮಾನ್ಯ ಜಂಟಿ ಆಯುಕ್ತರು(ಯ.ವ)ರವರು ಕಂಡಿಕೆ(11)ರಲ್ಲಿ ರೂ.20.00ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು,ತಾಂತ್ರಿಕ ಅನುಮೋದನೆಯನ್ನು ಅಧೀಕ್ಷಕ ಅಭಿಯಂತರರು(ಯ.ವ)ರವರು ಕಂಡಿಕೆ(13)ರಲ್ಲಿ ನೀಡಿರುತ್ತಾರೆ.ಆದ್ದರಿಂದ ಸದರಿ ಕಾಮಗಾರಿಗೆ ಕಾಮಗಾರಿ ಸಂಖೇತ ನೀಡಲು ಕಡತವನ್ನು ಮಂಡಿಸಿದೆ.

Superintending Engineer
Yelahanka Zone
BBMP, Bangalore-92

ವಿಷಯ :

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
	(15) CE (YLNK) Job ಯನ್ನು ನೀಡಲು, ಕಡತವನ್ನು CFO ರವರಿಗೆ ಕಳುಹಿಸಿಕೊಡಲಾಗಿದೆ. ಮುಖ್ಯ ಅಭಿಯಂತರರು 06/02/13 ಬಿ.ಬಿ.ಎಂ.ಪಿ ಬೆಂಗಳೂರು ಮಹಾನಗರ ಪಾಲಿಕೆ ಬೆಂಗಳೂರು-92
	(6) JC (4)
	ವಾರ್ಡ್ ಸಂಖ್ಯೆ:09 ರಲ್ಲಿ ಬರುವ ಶ್ರೀನಿಧಿ ಲೇಔಟ್ ಮತ್ತು ದೀಮಂಡಲ ಲೇಔಟ್ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು, ಪಾಲಿಕೆಯ ಆಯುಕ್ತರವರನ್ನು ಕೋರಿದ್ದು,ಮಾನ್ಯ ಶಾಸಕರು ಅನುದಾನದಡಿಯಲ್ಲಿ (ಪಿ 2434) ರಲ್ಲಿ ಕೈಗೆತ್ತಿಕೊಳ್ಳಲು ಸಂಬಂಧಪಟ್ಟ ಅಭಿಯಂತರರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಅಂದಾಜು ಮೊತ್ತವು ರೂ.20.00 ಲಕ್ಷಗಳಾಗಿದ್ದು, ಸದರಿ ಕಾಮಗಾರಿಗೆ ಆಡಳಿತಾತ್ಮಕ, ತಾಂತ್ರಿಕ ಅನುಮೋದನೆಯನ್ನು ವಲಯದಿಂದ ನೀಡಲಾಗಿರುತ್ತದೆ , ಜಾಬ್ ಸಂಕೇತ ನೀಡಲು ಸಲ್ಲಿಸಿದೆ. ಜಂಟಿ ಆಯುಕ್ತರು 7/2/13 ಯಲಹಂಕ ವಲಯ
	(7) ಮುಖ್ಯ ಆರ್ಥಿಕ ಅಧಿಕಾರಿಗಳು

ಕರ್ನಾಟಕ ಮುನ್ಸಿಪಲ್ ಆಫೀಸ್
ಯಲಹಂಕ ವಲಯ, ಬೆಂಗಳೂರು
ಸಂ. 6767 ದಿನಾಂಕ: 7/2/13

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ ..... (5)

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
18)	ಸದರಿ ಕಾಮಗಾರಿಗೆ ಮಾನ್ಯ ಜಂಟಿ ಆಯುಕ್ತರು (ಯಲಹಂಕ ವಲಯ)ರವರು ದಿನಾಂಕ:04.02.2013ರಂದು ಆಡಳಿತಾತ್ಮಕ ಅನುಮೋದನೆಯನ್ನು, ತಾಂತ್ರಿಕ ಅನುಮೋದನೆಯನ್ನು ದಿನಾಂಕ:06.02.2013ರಂದು ಅಧೀಕ್ಷಕ ಅಭಿಯಂತರರು (ಯಲಹಂಕ ವಲಯ) ನೀಡಿರುತ್ತಾರೆ. ಸದರಿ ಕಾಮಗಾರಿಗೆ ಸರ್ಕಾರದ ವತಿಯಿಂದ ಬಿಡುಗಡೆವಾಗುತ್ತಿರುವ ವಿಶೇಷ ಅನುದಾನ ರೂ.300.00 ಕೋಟಿಗಳ ಅನುದಾನದಡಿ ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರಾಭಿವೃದ್ಧಿಗೆ ರೂ. 10.00 ಕೋಟಿಗಳನ್ನು ಪಾಲಿಕೆ ವ್ಯಾಪ್ತಿಯಲ್ಲಿನ ವಿಧಾನ ಸಭಾ ಕ್ಷೇತ್ರಗಳ ಅಭಿವೃದ್ಧಿ ಕಾಮಗಾರಿಗಳು ಲೆಕ್ಕ ಶೀರ್ಷಿಕೆ ಪಿ 2201 ಅಡಿಯಲ್ಲಿ ಆಡಳಿತಾತ್ಮ ಅನುಮೋದನೆ, ತಾಂತ್ರಿಕ ಅನುಮೋದನೆ ಮತ್ತು ಜಾಬ್ ಕೋಡ್ ನೀಡಲು ಅನುಮೋದನೆ ಕೋರಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ)ರವರು ಟಿಪ್ಪಣಿಯನ್ನು ದಿನಾಂಕ: 12.02.2013ರಂದು ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಗೆ ಸಲ್ಲಿಸಲಾಗಿ, ದಿನಾಂಕ: 18.02.2013 ರಂದು ನಡೆದ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಸಭೆಯ ವಿಷಯದ **"ಸಂಖ್ಯೆ: ಬೃ.ಸಾ.ಕಾ.ಸ್ಥಾ.ಸ./220/2012-13 ನಡೆವಳಿಯಲ್ಲಿ ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ: 12.02.2012 ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿದೆ"** ಎಂದು ಸೂಚಿಸಲಾಗಿರುತ್ತದೆ.
19)	ಅದರಂತೆ, ಮುಖ್ಯ ಆರ್ಥಿಕ ಅಧಿಕಾರಿ (ಜೆ.ಎನ್.ಎನ್.ಯು.ಆರ್.ಎಂ)ರವರು ಕಾಮಗಾರಿ ಸಂಕೇತವನ್ನು **009-13-000049** ರಂತೆ ಒದಗಿಸಿರುತ್ತಾರೆ. ಆದರಂತೆ, ಸದರಿ ಕಾಮಗಾರಿಯ ಅಂದಾಜು ಪಟ್ಟಿಗೆ ಕರಡು ಗುತ್ತಿಗೆ ಅನುಬಂಧವನ್ನು ತಯಾರಿಸಲಾಗಿದ್ದು, ಅನುಮೋದನೆಗಾಗಿ ಮುಖ್ಯ ಅಭಿಯಂತರರು (ಯಲಹಂಕ ವಲಯ)ರವರಿಗೆ ಮಂಡಿಸಬಹುದಾಗಿರುತ್ತದೆ. HSP Dm DTS ಅನುಮೋದಿಸಿದೆ ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪು ವಿಭಾಗ 7/2/2013 Superintending Engineer Supdt Yelahanka Zone BBMP, Bangalore-92 8/2/2013
20)	KRIDL ನಿಂದ ಕೆಲಸ ಮಾಡಿಸಲು ಕಾರಣ ಬರೆಯಿರಿ ಮತ್ತು ಕೆಲಸ ಮಾಡಲು ಸೂಚನೆ ನೀಡಿರುವ ಬಗ್ಗೆ ಕಾರ್ಯಪಾಲಕ ಇಂಜಿನಿಯರ್ ಬ್ಯಾಟರಾಯನಪುರ ವಿಭಾಗ, ಬೃ.ಬೆ.ಮ.ಪಾ. ಯಲಹಂಕ ವಲಯ ಸಹಕಾರನಗರ, ಬೆಂಗಳೂರು-92. 8/2/2013